ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 201/2018

| ಪಿರ್ಯಾದಿ | | ಆರೋಪಿ |
|---|---|---|
| ಮೆಃ ಶ್ರೀರಾಮ ಟ್ರಾನ್ಸಪೋರ್ಟ ಫೈನಾನ್ಸ ಕಂ. ಲಿ. ಹುಬ್ಬಳ್ಳಿ ಬ್ರಾಂಚ್ ಕುಮಟಾ | ವಿರುದ್ಧ | ಶ್ರೀ ಸಂತೋಷ ಪಾಂಡುರಂಗ ಮೇಸ್ತಾ |

ಆರೋಪಿಃ

ಶ್ರೀ ಸಂತೋಷ ಪಾಂಡುರಂಗ ಮೇಸ್ತಾ,
ವಯಸ್ಸು : 29 ವರ್ಷ, ಉ: ವ್ಯವಹಾರ
ಸಾಃ ಮೂರಕಟ್ಟಾ, ಮುಗವಾ ಕ್ರಾಸ್, ಪಾಳ್ಯಾ ರೋಡ್, ಹೊನ್ನಾವರ.

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ಆರೋಪಿತನಾದ ನೀನು, ಪಿರ್ಯಾದುದಾರರ ಸಂಘದಿಂದ ವಾಹನ ಖರೀದಿ ಸಾಲದ ಖಾತೆ ನಂ.KUMTA0102280009 ನೇದರ ಪ್ರಕಾರ ರೂ.1,11,151/– ವಾಹನ ಸಾಲವನ್ನು ಕರಾರು ಪತ್ರ ಬರೆದುಕೊಟ್ಟು ಪಡೆದುಕೊಂಡಿದ್ದು , ಸದರಿ ಸಾಲದ ಅಗ್ರಿಮೆಂಟನ ಒಟ್ಟೂ ಮೊತ್ತ ರೂ.1,96,805/– ಆಗಿದ್ದು ಸದರಿ ಸಾಲದ ಹಣ ಹಿಂತಿರುಗಿಸುವ ಹಣದ ಬಾಬ್ತು ನೀವು ಸಿಂಡಿಕೇಟ್ ಬ್ಯಾಂಕ್, ಹೊನ್ನಾವರ ಶಾಖಾ ಖಾತೆಯ ಚೆಕ್ ನಂ.735241 ನೇದನ್ನು ದಿಃ 20–11–2013, ರೂ.1,00,000/– ಗಳಿಗೆ ಅಂತಾ ನಮೂದಿಸಿ ಪಿರ್ಯಾದಿದಾರರಿಗೆ ನೀಡಿದ್ದು , ಪಿರ್ಯಾದಿದಾರರು ಸದರಿ ಚೆಕ್ ನ್ನು ಎಚ್‌ಡಿ ಎಫ್‌ಸಿ ಬ್ಯಾಂಕ್ ಕುಮಟಾ ಶಾಖೆಗೆ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ ನಿಮ್ಮ ಚೆಕ್ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ (funds insufficient) ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ದಿಃ 21–11–2013 ರಂದು ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ 02–12–2013 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು , ಸದರಿ ನೋಟಿಸು ನಿಮಗೆ ದಿಃ 11–12–2013 ರಂದು ಜ್ಯಾರಿಯಾಗಿದ್ದು, ಆ ನಂತರ 15 ದಿವಸ ಕಳೆದರೂ ನೀವು ನೋಟಿಸ್‌ಗೆ ಉತ್ತರ ಕೊಡದೇ ಹಾಗೂ ಪಿರ್ಯಾದಿದಾರರಿಗೆ ನೀಡಬೇಕಾದ ಸಾಲದ ಹಣವನ್ನು ವಾಪಸ್ಸು ಕೊಡದೇ ಅಮಾನ್ಯಗೊಳ್ಳುವಂತಹ ಚೆಕ್‌ನ್ನು ಪಿರ್ಯಾದಿಗೆ ನೀಡಿ , ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ? ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 15–11–2021.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ